

> ಸೀರೆ ನನಗೆ ಕಲಾಕೃತಿಯಂತೆಯೂ ತೋರುತ್ತದೆ. ಎಷ್ಟು ಭಿನ್ನ ರೂಪದಲ್ಲಿ ಬೇಕಾದರೂ ಸೀರೆಯನ್ನು ಸುಂದರವಾಗಿ ಪ್ರಸ್ತುತಪಡಿಸಬಹುದು
>
> **-ಪವನ ಬಿ. ಆಚಾರ್,**
>
> **ಕಲಾವಿದೆ, ಫ್ಯಾಷನ್ ತಜ್ಞೆ**





ಬೆಂಗಳೂರಿನ ಮೇಕಪ್ ಕಲಾವಿದೆ ರಾಜೇಶ್ವರಿ.

‘ಮೊದಲು ದಕ್ಷಿಣ ಭಾರತ ಶೈಲಿಯಲ್ಲಿಯೇ ಹಲವು ಮಾರ್ಪಾಟು ಮಾಡಿ ಸೀರೆ ಉಡಿಸುವ ರೂಢಿ ಇತ್ತು. ಈಗ ಸಾಂಪ್ರದಾಯಿಕವಾಗಿ ಮಾತ್ರವಲ್ಲ, ಸ್ಟೈಲಿಶ್ ಆಗಿ ಕೂಡ ಕಾಣಬೇಕೆಂದು ಎಲ್ಲರೂ ಬಯಸುತ್ತಾರೆ. ಹೀಗಾಗಿ 'ಇಂಡೊ ವೆಸ್ಟರ್ನ್ ಶೈಲಿ’ ಮುನ್ನೆಲೆಯಲ್ಲಿದೆ.

ಸೀರೆ ಚೆಂದ ಕಾಣುವುದಷ್ಟೇ ಅಲ್ಲ, ಅದನ್ನು ತೊಟ್ಟು ಓಡಾಡಲು ಕಷ್ಟವಾಗದಂತೆ ಉಡಿಸಬೇಕು. ಎಲ್ಲರಿಗೂ ಎಲ್ಲಾ ಶೈಲಿಯೂ ಒಪ್ಪುವುದಿಲ್ಲ. ಹಾಗಾಗಿ ಅವರ ದೇಹಕ್ಕೆ ಹೊಂದುವ ಶೈಲಿಯಲ್ಲಿ ಉಡಿಸುವುದು ಕೂಡ ಒಂದು ಕಲೆ' ಎನ್ನುತ್ತಾರೆ ಅವರು.

ರಾಜೇಶ್ವರಿ ಅವರ ಪ್ರಕಾರ ಸೀರೆ ಉಡುವುದರಲ್ಲಿ ಸುಮಾರು ಮೂವತ್ತರಿಂದ ನಲವತ್ತು ಶೈಲಿಯಿದೆ. 'ಸದ್ಯ ಸಾಂಪ್ರದಾಯಿಕವಾಗಿ, ನವ್ವಾರಿ ಶೈಲಿಯನ್ನು ಹೆಚ್ಚಿನ ಮಹಿಳೆಯರು ಇಷ್ಟಪಡುತ್ತಿದ್ದಾರೆ. ಸ್ಕರ್ಟ್ ವಿತ್ ಸ್ಯಾರಿ ಯುವತಿಯರ ಮೆಚ್ಚು. ದಿರಿಸಿನಲ್ಲಿ ದಿನೇ ದಿನೇ ಹೊಸ ಹೊಸ ವಿನ್ಯಾಸ ಹುಟ್ಟಿಕೊಳ್ಳುತ್ತಲೇ ಇರುತ್ತದೆ. ಇದೇ ಅಲ್ಲವೇ ಫ್ಯಾಷನ್ ಎಂದರೆ?' ಎನ್ನುತ್ತಾರೆ ರಾಜೇಶ್ವರಿ. ರಾಜೇಶ್ವರಿ ಅವರು ಟ್ರೆಂಡ್‌ಗೆ ತಕ್ಕಂತೆ ಭಿನ್ನ ಶೈಲಿಯಲ್ಲಿ ಸೀರೆ ಉಡಿಸುವುದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಕರಗತ ಮಾಡಿಕೊಂಡವರು. ತಾವೇ ಹಲವು ಪ್ರಯೋಗಗಳನ್ನು ಮಾಡಿದವರು.

ಸೀರೆ ಉಡುವುದು 'ಓಲ್ಡ್ ಫ್ಯಾಷನ್' ಎನ್ನುವವರು ಈಗ ಸೀರೆಯ ಫ್ಯಾಷನ್‌ಗೆ ಮಾರು ಹೋಗುತ್ತಿದ್ದಾರೆ. ಥರಾವರಿ ಶೈಲಿಗಳಿಗೆ ಮನಸೋತಿದ್ದಾರೆ.

ಪ್ರತಿಕ್ರಿಯಿಸಿ: **feedback@sudha.co.in**